ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 04-08-2021.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಂ. ಕೆ. ಕೆ. ವಕೀಲರಿಂದ.**

1) ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಈ ದಾವೆಯಲ್ಲಿ ದಾಖಲು ಮಾಡಿದ ವಂಶವೃಕ್ಷದ ಬಗ್ಗೆ ಮಾಹಿತಿ ಇರುತ್ತದೆ. ರಾಮಜಿ ಲಮಾಣಿ ನನ್ನ ಅಜ್ಜ ಇರುತ್ತಾರೆ. ಅವರ ಹೆಂಡತಿ ಸೋಮವ್ವ ಲಮಾಣಿ ಎಂದರೆ ಸರಿ. ಅವರಿಗೆ ಶಿವಪ್ಪ, ಸೋಮಲೆಪ್ಪ, ಹೇಮಲವ್ವ ಮತ್ತು ಯಂಕವ್ವ ಎಂಬ ಒಟ್ಟು 4 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಹೆಣ್ಣು ಮಕ್ಕಳಾದ ಹೇಮಲವ್ವ ಮತ್ತು ಯಂಕವ್ವ ಇವರನ್ನು ನಾವು ಹಾಜರುಪಡಿಸಿದ ದಾವಾ ಶೆಡ್ಯೂಲ್ ಬಿ ವಂಶಾವಳಿಯಲ್ಲಿ ತೋರಿಸಿದ್ದೇವೆ.

2) ಮೂಲಪುರುಷ ರಾಮಜಿಯ ಮಗನಾದ ಶಿವಪ್ಪ ಮತ್ತು ಆತನ ಹೆಂಡತಿ ಪಾರ್ವತೆವ್ವ ಇವರಿಗೆ ವಾದಿ ಮತ್ತು 8 ರಿಂದ 14 ರವರೆಗಿನ ಪ್ರತಿವಾದಿಗಳು ವಾರಸುದಾರರು ಇರುತ್ತಾರೆ ಎಂದರೆ ಸರಿ. ಹೇಮಲವ್ವ ಮತ್ತು ವೆಂಕವ್ವ ಇವರು ಜೀವಂತ ಇರುತ್ತಾರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಹೇಮಲವ್ವ ಮತ್ತು ವೆಂಕವ್ವ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ.

3) ಸೋಮಲೆಪ್ಪ ಇವರು ಸಹ ಪೋತಿಯಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಸೋಮಲೆಪ್ಪನ ಹೆಂಡತಿ ಇರುತ್ತಾಳೆ ಎಂದರೆ ಸರಿಯಲ್ಲ. ಸದರಿ ದೇವಲೆವ್ವ ಮತ್ತು ಸೋಮಲೆಪ್ಪನಿಗೆ ಮಕ್ಕಳು ಇಲ್ಲದೇ ಇದುದರಿಂದ 2 ನೇ ಪ್ರತಿವಾದಿ ಸಂತೋಷನನ್ನು ದತ್ತಕಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತುಮರಿಕೊಪ್ಪ ಗ್ರಾಮದ ರಿ. ಸ. ನಂಃ 37 ರಲ್ಲಿ ಮೂಾಲತಹ ಒಟ್ಟು ಅಖಂಡವಾಗಿ 12 ಎಕರೆ 19 ಗುಂಟೆ ವಿಸ್ತೀರ್ಣದ ಜಮೀನು ಇದ್ದು, ಅದರಲ್ಲಿ ಪೋಟ ಖರಾಬ ಹೊರತು ಪಡಿಸಿ 12 ಎಕರೆ 14 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ.

4) ಸದರಿ ಜಮೀನಿನಲ್ಲಿ ಮೂಲಪುರುಷ ರಾಮಜಿ ಇವನಿಗೆ 9 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನು ಇತ್ತು ಎಂದರೆ ಸರಿ. ಮೂಲಪುರುಷ ಇವರು ದಿಃ 11.111982 ರಂದು ಪೋತಿಯಾಗಿರುತ್ತಾರೆ ಎಂದರೆ ಸಾಕ್ಷಿಯು ಪೋತಿಯಾಗಿರುವುದು ನಿಜ, ಆದರೆ ನನಗೆ ದಿನಾಂಕ, ತಿಂಗಳು ಮತ್ತು ಇಸ್ವಿ ನೆನಪಿರುವುದಿಲ್ಲ. ಸದರಿ ಮೂಲಪುರುಷ ರಾಮಜಿ ಈತನು ಪೋತಿಯಾದ ನಂತರ ಅವರಿಗೆ ಶಿವಪ್ಪ, ಸೋಮಲೆಪ್ಪ, ಹೇಮಲವ್ವ ಮತ್ತು ಯಂಕವ್ವ ಎಂಬ ಒಟ್ಟು 4 ಜನ ಮಕ್ಕಳು ಮಾತ್ರ ವಾರಸುದಾರರು ಇರುತ್ತಾರೆ ಎಂದರೆ ಸರಿ

5) ಹೇಮಲವ್ವ ಮತ್ತು ಯಂಕವ್ವ ಇವರು ಕಬೂಲಿ ಕೊಟ್ಟ ಪ್ರಕಾರ ಮೂಲಪುರುಷನ ಗಂಡು ಮಕ್ಕಳಾದ ಶಿವಪ್ಪ ಮತ್ತು ಸೋಮಲೆಪ್ಪ, ಇವರ ಹೆಸರಿನಲ್ಲಿ ಮಾತ್ರ ಕಂದಾಯ ದಾಖಲಾಗಿರುತ್ತದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಶಿವಪ್ಪ ಮತ್ತು ಸೋಮಲೆಪ್ಪ, ಇವರು 1984 ನೇ ಇಸ್ವಿಯಲ್ಲಿ ತಮ್ಮ ಒಳಗೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ

ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಪಾಲು ವಿಭಾಗದ ನಂತರ ನನ್ನ ಅಜ್ಜ ಶಿವಪ್ಪನಿಗೆ 37/2ಬ ಸರ್ವೆ ನಂಬರನಲ್ಲಿ 6 ಎಕರೆ 7 ಗುಂಟೆ ವಿಸ್ತೀರ್ಣದ ಜಮೀನು ಅವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಅದರಂತೆ ಸೋಮಲೆಪ್ಪ ಇವನಿಗೆ ರಿ . ಸ. ನಂಃ 37/2ಬ ದಲ್ಲಿ 3 ಎಕರೆ 7 ಗುಂಟೆ ವಿಸ್ತೀರ್ಣದ ಜಮೀನು ಬಂದಿರುತ್ತದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

6) ಸದರಿ ಪಾಲು ವಿಭಾಗ ಪತ್ರದಂತೆ ದಾವಾ ಎ ಅನುಸೂಚಿತ 1 ಮತ್ತು 3 ನೇ ಕ್ರಮಾಂಕದ ಆಸ್ತಿಗಳು ಶಿವಪ್ಪ ಮತ್ತು ಸೋಮಲೆಪ್ಪ ಇವರ ಹಿಸ್ಸೆಗೆ ಸಾಮೂಹಿಕವಾಗಿ ಬಂದಿರುತ್ತದೆ ಎಂದರೆ ಸರಿ. ನನ್ನ ಅಜ್ಜ ಶಿವಪ್ಪನಿಗೆ ಪಾಲು ವಿಭಾಗದಲ್ಲಿ ಬಂದ 37/2ಬ ಸರ್ವೆ ನಂಬರನಲ್ಲಿ 6 ಎಕರೆ 7 ಗುಂಟೆ ಪೈಕಿ ಪೂರ್ವ ಭಾಗದ 3 ಎಕರೆ ವಿಸ್ತೀರ್ಣದ ಜಮೀನನ್ನು ದಿಃ 02.05.1984 ರಂದು ಗೋಣೆಪ್ಪ ಬೀಮಪ್ಪ ಮಾಗಳದ ಇವನಿಗೆ ಖರೀದಿಗೆ ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತಾರೆ ಎಂಬುದರೆ ಬಗ್ಗೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು ಆ ಬಗ್ಗೆ ನಾನು ವಕೀಲರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಆಸ್ತಿಯನ್ನು ಖರೀದಿ ಹಿಡಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.